**<u>IIನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ</u>**

**OS No.293/2011**
**PW.2**

**<u>ದಿನಾಂಕಃ 11.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**
**<u>ಮುಂದುವರೆದ ಪಾಟೀ ಸವಾಲು 1 ಮತ್ತು 3ನೇ ಪ್ರತಿವಾದಿಪರ ಶ್ರೀಃ GRS ವಕೀಲರಿಂದ.</u>**

**ಸಾಕ್ಷಿಗೆ ಮರಾಠಿ ಭಾಷೆ ಬರುತಿದ್ದು ಕನ್ನಡ ಭಾಷೆ ಅರ್ಥವಾಗದ ಕಾರಣ ವಕೀಲರಾದ ಶ್ರೀಮತಿ:JDP ರವರನ್ನು ನೇಮಿಸಿ ಮರಾಠಿ ಭಾಷೆಗೆ ತರ್ಜುಮೆ ಮಾಡಿ ನಂತರ ಕನ್ನಡಕ್ಕೆ ಭಾಷಾಂತರಿಸಿಕೊಂಡು ಹೇಳಿಕೆ ಪಡೆದುಕೊಳ್ಳಲಾಯಿತು. ಪ್ರತಿವಾದಿಯು ತರ್ಜುಮೆದಾರರರಿಗೆ ತರ್ಜುಮೆದಾರರ ಫೀ ರೂ.300/- ನೀಡಲು ಅದೇಶಿಸಿದೆ.**

ಮೂಲ ದಾವಾ ನಂ.710/2009 ಸರ್ವೇ ನಂ.313/3 ನೇದರ ಕುರಿತು ಸಲ್ಲಿಸಲಾಗಿರುತ್ತದೆ ಎಂದರೆ ಸರಿ. ಸದರಿ ಮೂಲ ದಾವೆಯಲ್ಲಿ ಈಗಾಗಲೆ ಕುಟುಂಬದ ಆಸ್ತಿ ವಾಟ್ನಿ ವಿಭಾಗ ಆಗಿರುತ್ತದೆ ಎಂದು ನಾನು ಈಗಾಗಲೆ ಒಪ್ಪಿ ಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಾಟ್ನಿ ಪ್ರಕಾರ ಆಯಾ ಪಕ್ಷಗಾರರ ಎಲ್ಲರೂ ಅವರ ಅವರ ಭಾಗಕ್ಕೆ ಬಂದ ಆಸ್ತಿಯಲ್ಲಿ ಸ್ವಾಧೀನ ಅನುಭವದಲ್ಲಿ ಇರುತ್ತಾರೆ ಎಂದು ನಾನು ಪಪ್ಪಿ ಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ಪ್ರಕಾರ ನಾನು ಸಹ ಪ್ರತ್ಯೇಕವಾಗಿ ಸ್ವಾಧೀನ ಅನುಭವದಲ್ಲಿ ಇರುತ್ತೇನೆ ಎಂದು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈ ವಿಷಯ ಎಲ್ಲಾ ಗೊತ್ತಿದ್ದರು ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹೊನಗಾ ಶಾಂತಿನಗರದಲ್ಲಿ ನನ್ನದು ಮನೆ ಇರುತ್ತದೆ ಎಂದರೆ ಸರಿ. ಸದರಿ ಮನೆಯಲ್ಲಿ ನಾನು ಮತ್ತು ನನ್ನ ಹೆಂಡತಿ ಇರುತ್ತೇವೆ. ಸದರಿ ಮನೆಗೆ ಪಂಚಾಯಿತಿ ನಂಬರನ್ನು ಕೊಟ್ಟಿರುವುದಿಲ್ಲ. ಪಂಚಾಯಿತಿಗೆ ತೆರಿಗೆ ಕೊಟ್ಟಿರುತ್ತೇನೆ ಎಂದರೆ ಸರಿ. ವಿಧ್ಯುತ್ ಸಂಪರ್ಕ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ತಾತ್ಕಾಲಿಕವಾಗಿ ಸದರಿ ಮನೆಗೆ ವಿಧ್ಯುತ್ ಸಂಪರ್ಕ ಪಡೆದುಕೊಂಡಿರುತ್ತೇನೆ. ಸದರಿ ಮನೆಯ ಪಂಚಾಯಿತಿಯ ನಂ.1572ಇರುತ್ತದೆ ಎಂದರೆ ಸರಿ. ಸದರಿ ಮನೆ ಮೂರು ಹಂತಸ್ತಿನ ಕಟ್ಟಡ

ಎಂದರೆ ಸರಿ. ಅದೇ ರೀತಿ ಕುಂಬಾರ ಗಲ್ಲಿಯಲ್ಲಿ ಒಂದು ಮನೆ ಇರುತ್ತದೆ ಎಂದರೆ ಸರಿ. ಸದರಿ ಮನೆಸಹ ಅರ್ಸಿಸಿ ಕಟ್ಟಡ ಎಂದರೆ ಸರಿ. ಸದರಿ ಎರಡು ಮನೆಗಳನ್ನು ಪ್ರಸ್ತುತ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿಯು ಆ ಮನೆಗಳನ್ನು ಏಕೆ ಸೇರಿಸಬೇಕು ಎಂದು ಮರು ಪ್ರಶ್ನಿಸುತ್ತಾರೆ. ಈ ಎರಡು ಮನೆಗಳ ಕುರಿತು ನನ್ನ ಪ್ರತಿವಾದ ಪತ್ರದಲ್ಲಿ ಹಾಗೂ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿಲ್ಲ. ಈ ಎರಡು ಮನೆಗಳು ವಾದಿ ಮತ್ತು ಪ್ರತಿವಾದಿಯರ ಜಂಟಿ ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ಸದರಿ ಮನೆಗಳಿಗೆ ಒಂದನೇ ವಾದಿ, 1ನೇ ಪ್ರತಿವಾದಿ ಮತ್ತು 3ನೇ ಪ್ರತಿವಾದಿಗಳು ನನಗೆ ಸದರಿ ಮನೆಯನ್ನು ಕಟ್ಟಲು ಹಣ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಒಂದನೇ ವಾದಿ, 1ನೇ ಪ್ರತಿವಾದಿ ಮತ್ತು 3ನೇ ಪ್ರತಿವಾದಿಗಳು ಸತಹ ನಿಂತು ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರು ಮನೆ ಕಟ್ಟಿಸಿರುವುದಿಲ್ಲ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ.

2. ಸಾಕ್ಷಿಗೆ ಎರಡು ಪೋಟಗಳನ್ನು ತೋರಿಸಿ ಸದರಿ ಪೊಟೋಗಳು ಕುಂಬಾರಗಲ್ಲಿಯಲ್ಲಿರುವ ಮನೆ ಸಂಬಂಧಿಸಿದ್ದವು ಆಗಿರುತ್ತವೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದರ ಮೇರೆಗೆ ಅವುಗಳನ್ನು ನಿಡಿ.9 ಮತ್ತು ನಿಡಿ.10 ಎಂದು ಗುರುತಿಸಲಾಯಿತು. ಒಟ್ಟು 12 ಜಮೀನುಗಳು ಇರುತ್ತವೆ ಅವುಗಳ ಸರ್ವೇ ನಂಬರು ಹಾಗೂ ಚಕ್ಕ ಬಂದಿಯನ್ನು ಹೇಳಲು ಬರುವುದಿಲ್ಲ. 1ನೇ ವಾದಿಯ ಜವಾಬಿನ ಕುರಿತು ನನಗೆ ಮಾಹಿತಿ ಇರುವುದಿಲ್ಲ. ವಾದಿಯ ಜವಾಬಿನ್ನು ವಕೀಲರ ಮೂಲಕ ಓದಿಸಿ ತಿಳಿದುಕೊಳ್ಳುವ ಪ್ರತ್ನ ಮಾಡಿಲ್ಲ. ದಾವಾ ಆಸ್ತಿಗಳು ಊರಿಗೆ ಹೊಂದಿಕೊಂಡು ಇರುತ್ತವೆ ಎಂದರೆ ಸರಿ. ದಾವಾ ಆಸ್ತಿಗಳ ಅಕ್ಕ ಪಕ್ಕದಲ್ಲಿ ಯುನಿವರ್ಸಿಟಿ ಹಾಗೂ ರಾಷ್ಟ್ರೀಯ ಹೆದ್ದಾರಿ ಇದ್ದು ದಾವಾ ಆಸ್ತಿಗಳ ಮೌಲ್ಯ 5ಲಕ್ಷ ಪ್ರತಿ ಗುಂಟೆಗೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳ ಕುರಿತು ಉಪನೊಂದಣಾಧಿಕಾರಿ ಕಛೇರಿಯಲ್ಲಿ ಮಾರುಕಟ್ಟೆ ಮೌಲ್ಯವನ್ನು ವಿಚಾರಿಸಿಲ್ಲ. ಸದರಿ ಮಾರುಕಟ್ಟೆ ಮೌಲ್ಯದ ಕುರಿತು ಮಾಹಿತಿ ಇದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಬೆನ್ನಹಳ್ಳಿಯಲ್ಲಿರುವ ಮನೆ ನಂ.597 ರಲ್ಲಿ ನಾನು ಮತ್ತು ತಾನಾಜಿ 3ನೇ

ಪ್ರತಿವಾದಿ ಇರುತ್ತೇವೆ ಎಂದರೆ ಸರಿ. ತಾನಾಜಿ 3ನೇ ಪ್ರತಿವಾದಿಗೆ ಮುಂದಿನ ಭಾಗ ಆತನ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ. ನನ್ನ ಹಿಸ್ಸೆಗೆ ಹಿಂದಿನ ಭಾಗ ಅಂದರೆ ಉತ್ತರ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿ. ತಾಜಿಗೆ 3ನೇ ಪ್ರತಿವಾದಿಯ ಭಾಗಕ್ಕೆ ಬಂದ ಆಸ್ತಿ ಪಂಚಾಯಿತಿಯ ದಾಖಲೆಯಲ್ಲಿ ಆತನ ಹೆಸರು ಮಾಲೀಕನು ಎಂದು ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಹಿಸ್ಸೆಗೆ ಬಂದಿರುವ ಆಸ್ತಿಯು ಸಹ ಪಂಚಾಯಿತಿ ದಾಖಲೆಗಳಲ್ಲಿ ನನ್ನ ಹೆಸರು ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿ ತನ್ನ ಭಾಗಕ್ಕೆ ಬಂದ ಹಿಸ್ಸೆಗೆ ಪ್ರತ್ಯೇಕವಾಗಿ ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ನನ್ನ ಹಿಸ್ಸೆಗ ಬಂದ ಉತ್ತರ ಭಾಗದಲ್ಲಿರುವ ಆಸ್ತಿಗೆ ಪ್ರತ್ಯೇಕವಾಗಿ ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಮನೆ ನಂ.591/F ನೇದರಲ್ಲಿ ಎರಡು ಭಾಗಗಳು ಇರುತ್ತೇವೆ ಎಂದರೆ ಸರಿ. ಸದರಿ ಮನೆಯಲ್ಲಿ ಒಂದು ಭಾಗದಲ್ಲಿ ನಾರಾಯಣ 1ನೇ ವಾದಿ ಹಾಗೂ ಅಪ್ಪಯ್ಯ 1ನೇ ಪ್ರತಿವಾದಿ ಇನ್ನೊಂದು ಭಾಗದಲ್ಲಿ ತಲಾ ಅರ್ಧ ಭಾಗದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಸದರಿ 1ನೇ ವಾದಿ ಮತ್ತು 1ನೇ ಪ್ರತಿವಾದಿ ತಮ್ಮ ಭಾಗಕ್ಕೆ ಬಂದ ಹಿಸ್ಸೆ ಗೆ ಪ್ರತ್ಯೇಕವಾಗಿ ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. 1ನೇ ವಾದಿ ನಾರಾಯಣ ಮನೆ ನಂ.591/F ತನ್ನ ಭಾಗಕ್ಕೆ ಬಂದ ಹಿಸ್ಸೆಯಲ್ಲಿ ಹಳೆ ಮನೆಯನ್ನು ಕಡೆವಿ ಹೊಸ ಮನೆಯನ್ನು ಕಟ್ಟಿಸಿರುತ್ತಾರೆ ಎಂದರೆ ಸರಿ. ಸದರಿ ಮನೆ ಎಟಡು ಹಂತಸ್ತಿನ ಮನೆ ಎಂದರೆ ಸರಿ. ಸದರಿ ಮನೆಯಲ್ಲಿ ಆತನ ಹೆಂಡತಿ ಮಕ್ಕಳು ವಾಸವಾಗಿರುತ್ತಾರೆ ಎಂದರೆ ಸರಿ. ಸದರಿ ಮನೆಗೆ ನಾನಗಾಗಲಿ, ಅಪ್ಪಯ್ಯ ಹಾಗೂ ತಾನಾಜಿಗಾಗಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ಹೆಸರು ದಾಖಲೆಯಲ್ಲಿ ಇರುತ್ತದೆ ಎಂದು ಎಂದು ನುಡಿಯುತ್ತಾರೆ. ನಾರಾವಯರವರ ಮನೆಯ ದಾಖಲೆಯಲ್ಲಿ ನನ್ನ ಹೆಸರು ಇರುತ್ತದೆ ಎಂದು ತೋರಿಸಲು ಪಂಚಾಯಿತಿ ದಾಖಲೆಯನ್ನು ಹಾಜರು ಪಡಿಸಬಲ್ಲೆ. ನಾರಾಯಣನ ಮನೆಯಲ್ಲಿ ಯಾವುದೇ ಹಕ್ಕು ಸಂಬಂಧ ಇಲ್ಲದಿದ್ದರು ಸಹ ಪಂಚಾಯಿತಿಯ ದಾಖಲೆಯನ್ನು ಹಾಜರು ಪಡಿಸುತ್ತೇನೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ 1ನೇ

ಪ್ರತಿವಾದಿ ಅಪ್ಪಯ್ಯನ ಭಾಗಕ್ಕೆ ಬಂದ ಮನೆಯಲ್ಲಿ ಆತನು ಪ್ರತ್ಯೇಕವಾಗಿ ವಾಸಮಾಡುತ್ತಾನೆ ಎಂದರೆ ಸರಿ. ಪ್ರತ್ಯೇಕವಾಗಿ ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡಿರುತ್ತಾನೆ ಎಂದರೆ ಸರಿ. ಸದರಿ ನಾರಾಯಣ ಕಟ್ಟಿದ ಮನೆಯ ಮೌಲ್ಯ 3ಕೋಟಿ ರೂಪಾಯಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮನೆ ನಂ.597ರ ಹಿತ್ತಲದಲ್ಲಿ 20X20ರ ಜಾಗವನ್ನು 1ನೇ ವಾದಿಗೆ ನೀಡಲಾಗಿರುತ್ತದೆ ಎಂದರೆ ಸರಿ. ಎಷ್ಟು ಜಾಗವನ್ನು ನೀಡಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ನಾರಾಯಣ 1ನೇ ವಾದಿಗೆ ನೀಡಲಾದ ಜಾಗದಲ್ಲಿ 2011ಕ್ಕಿಂತ ಪೂರ್ವದಲ್ಲಿ ಅಲ್ಲಿ ಮನೆಯನ್ನು ಕಟ್ಟಲಾಗಿರುತ್ತದೆ ಎಂದರೆ ಸರಿಯಲ್ಲ. 1ನೇ ವಾದಿ ಯಾವ ಇಸವಿಯಲ್ಲಿ ಮನೆ ಕಟ್ಟಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ಸದರಿ 1ನೇ ವಾದಿ ಕಟ್ಟಿದ ಮನೆಗೆ 2011ರಲ್ಲಿ ಅದರ ಕಿಮ್ಮತ್ತು 10ಲಕ್ಷ ರೂಪಾಯಿಗಳು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ, 1ನೇ ವಾದಿ ಹಾಗೂ 1 ಮತ್ತು 3ನೇ ಪ್ರತಿವಾದಿಗ ಆಧಾರ ಕಾರ್ಡುಗಳು ಬೇರೆ ಬೇರೆ ವಿಳಾಸದಲ್ಲಿ ಇರುತ್ತವೆ ಎಂದರೆ ಸರಿ. ಸದರಿ ಆಧಾರ ಕಾರ್ಡುಗಳು ತಮ್ಮ ಭಾಗಕ್ಕೆ ಬಂದ ಹಿಸ್ಸೆಯ ವಿಳಾಸದಲ್ಲಿ ಇರುತ್ತವೆ ಎಂದರೆ ಸರಿ. ಅದೇರೀತಿ ಚುನಾವಾಣ ಗುರುತಿನ ಚೀಟಿ ಹಾಗೂ ರೇಷನ್ ಕಾರ್ಡುಗಳು ಸಹ ಅವರ ಭಾಗಕ್ಕೆ ಬಂದ ಹಿಸ್ಸೆಯಲ್ಲಿ ಬೇರೆ ಬೇರೆ ವಿಳಾಸದಲ್ಲಿ ಪ್ರತ್ಯೇಕವಾಗಿ ಇರುತ್ತೇವೆ ಎಂದರೆ ಸರಿ.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು)**

**(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯನ್ನು ಯಥಾವತ್ತಾಗಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿಯಿದೆ.**

**Sd/-**

**II ಹೆಚ್ಚುವರಿ ನ್ಯಾಯಾಲಯ ಮತ್ತು**
**ಜೆ.ಎಂ.ಎಫ್.ಸಿ. ಬೆಳಗಾವಿ**